Development of Sericulture in Karnataka

626 SRI D. T. MAYANNA (Huliyurdurga).—Will the Minister for Law, Parliamentary Affairs, Animal Husbandry and Veterinary Services be pleased to state —

(a) the total amount of loan secured from the World Bank by the State Government for the development of Sericulture ;

(b) the amount spent by the Government in different districts of Karnataka from the loan secured as such ;

(c) out of this amount, the quantum of amount spent by the Government in the field of Sericulture at the "Mysore Race" Areas ;

(d) the scheme under taken by the Government in this zone for the development of this variety of Sericulture?

SRI Y. RAMAKRISHNA (Minister for Law, Parliamentary Affairs, Animal Husbandry and Veterinary Services).—

(a) Rs. 93.76 lakhs.

(b) Details are given in Annexure–I is appended.

(c) Rs. 3.67 lakhs.

(d) Schemes are as follows—

(i) 50 Chawki Rearing Centre have been established in Mysore Seed Zone.

(ii) 5 Technical Service Centres have been established.

(iii) It is proposed to start following buildings in Mysore Seed Zone farm with the assistance of Dutch Government :

1 Reeling Houses.

2 Living-cum-Reeling Houses.

3 Rearing Houses.

4 Nylon curtains and wired nets have been provided at cheaper rates to prevent the menace of Uji flies.

5 A Scheme has been prepared to construct separate houses to leave female flies on Chandrikes.

6 Government has fixed the incentive price of Seed Cocoon.

ANNEXURE-I

[Vide Reply to Starred Question No. 403 (626)]

	Districts		Expenditure (in Rs.)
1	Kolar	...	4,90,845
2	Bangalore	...	67,18,851
3	Tumkur	...	98,257
4	Mysore	...	7,98,374
5	Mandya	...	4,20,367
6	Chitradurga	...	1,56,488
7	Dharwad	...	83,372
8	Gulbarga	...	70,582
9	Bijapur	...	1,00,368
10	Bidar	...	19,442
11	Raichur	...	65,550
2	Hassan	...	93,591
13	Shimoga	...	1,00,190
14	Bellary	...	1,59,559
		Total	93,75,836

ಶ್ರೀ ಡಿ. ಟಿ. ಮಾಯಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಪ್ರಪಂಚದ ಹಣಕಾಸು ಸಂಸ್ಥೆಯಿಂದ ಕರ್ನಾಟಕ ಸರ್ಕಾರವು ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲು ಸುಮಾರು ೯೩ ಲಕ್ಷ ೭೫ ಸಾವಿರ ೮೩೬ ರೂಪಾಯಿಗಳನ್ನು ತಂದಿದೆ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಮೈಸೂರು ಜಿಲ್ಲೆಗೆ ಸುಮಾರು ೫,೯೮,೩೭೪ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆಂದು ಹೇಳಿದ್ದಾರೆ. ರಾಷ್ಟ್ರೀಯ ಕೃಷಿ ಇಲಾಖೆಯವರು ಕೊಟ್ಟಿರುವ ಪರಿಹಾರ ಕೂಡ ಇದರಲ್ಲಿ ಸೇರಿದೆಯೇ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಈಗ ವಿವರಗಳು ನನ್ನಲ್ಲಿ ಇಲ್ಲ. ಮಾನ್ಯ ಸದಸ್ಯರು ಇದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಎಂ.ಸಿ. ಬಸಪ್ಪ.—ತಾವು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ ೯೩ ಲಕ್ಷ ರೂಪಾಯಿಗಳ ಸಾಲ ಎಂದು ಬಿದ್ದಿದೆ. ಅದು ಸರಿಯೇ ?

Sri Y. Ramakrishna.— That is the amount received so far.

Sri M. C. Basappa,— You have received only that. Then, what about the rest of the amount ?

SRI Y. RAMAKRISHNA.— We are yet to receive it. We have to prefer bills after spending it.

SRI M. C. BASAPPA.— What is the total amount of loan agreed to by the World Bank for the implementation of this industry ?

SRI Y. RAMAKRISHNA.— 79.85 crores.

SRI M. C. BASAPPA.— Out of that amount, you have drawn only 93 lakhs of rupees.

SRI Y. RAMAKRISHNA.— We have already preferred the bills. We are yet to receive the amount.

SRI M. C. BASAPPA.— May I know the duration under which you have to draw Rs. 79 crores ?

SRI Y. RAMAKRISHNA,— 5 years.

SRI M. C. BASAPPA.— What is the time already lapsed ?

SRI Y. RAMAKRISHNA.— We are in second year.

SRI M. C. BASAPPA.— For two years, you have drawn only Rs. 93 lakhs. Is it not a meagre amount ?

SRI Y. RAMAKRISHNA.— Tha expenditure we have incurred is Rs. 656 lakhs. We have already spent that amount.

MR. SPEEKER.— What he asks is, when there is 5 years' stipulated time, you have drawn only 93 lakhs of rupees in two years. Don't you think that it is very very meagre ?

SRI Y. RAMAKRISHNA.— We have preferred already the bills for our amount. But we are yet to receive the amount.

SRI C. M. ARUMUGHAM.— Out of the loan amount received from the World Bank, what is the amount spent for purchase Cars, and how many cars and jeeps have been purchased ? The second question is, how many officers have visited Japan for purchase of machinery. What is the amount of TA and DA given to them ? The third question is, what is the amount spent for remuneration of the officers.

SRI Y. RAMAKRISHNA. — Those figures are not with me.

SRI C. M. ARUMUGHAM.— Sir the question is, what is the loan they have got and how much they have spent. Alright, what are the conditions under which you got this World Bank loan ? Out of this Rs. 93.76 lakhs, how much has been spent for the development of rearers and reelers ? How have you improved and how much you have spent for the improvement of the cocoons ?

SRI Y. RAMAKRISHNA.— We have received so far Rs. 93 lakhs. We received this amount from the World Bank as against one of the

bills. We have so far preferred three bills. The break up of this Rs. 93 lakhs will be made available if a separate question is put.

SRI C. M. ARUMUGHAM.— This is a question pertaining to loan got from the World Bank. How it has been spent is the question. You must answer that point. Sri Mayanna wanted answer for some area but we are interested in the entire amount of the World Bank loan. As on to-day you have preferred three bills. May I know the details of these three bills.

SRI Y. KAMAKRISHNA.— Here, only category wise particulars are there. He wants itemwise. I will furnish the answer.

ಮೊದಲನೆಯ ವರ್ಷ ೯೦ ಲಕ್ಷ ರೂಪಾಯಿಗಳು,

ಎರಡನೆಯ ವರ್ಷ ೩,೯೦೮ ಲಕ್ಷ ರೂಪಾಯಿಗಳು

ಮೂರನೆಯ ವರ್ಷ ೨,೫೦೫ ಲಕ್ಷ ರೂಪಾಯಿಗಳು

ಮೊದಲು ನಾವು ಹಣವನ್ನು ಖರ್ಚು ಮಾಡಬೇಕು, ಖರ್ಚು ಮಾಡಿದ್ದರಲ್ಲಿ ಸುಮಾರು ೭೫ ಪರ್ಸೆಂಟ್ ಹಣವನ್ನು ಅವರು ಲೋನ್ ಎಂದು ಕೊಡುತ್ತಾರೆ ಈಗ ನಾವು ೯೦ ಲಕ್ಷ ರೂಪಾಯಿ ಗಳನ್ನು ಕೊಡಿ ಎಂದು ಕೇಳಿದ್ದೇವೆ.

SRI M. C. BASAPPA.— For the question 'e'...

SRI Y RAMAKRISHNA.— One clarification, I would like to give. First, we have to spend the amount and then we have to prefer the bill. We must spend atleast 75%. So we have got Rs. 93 lakhs as first instalment.

SRI C. M. ARUMUGHAM.— What are terms and conditions for securing this loan of Rs. 79 crores ?

SRI Y. RAMAKRISHNA.—The first is to improve the cocoon industry ಮತ್ತು ಎರಡನೆಯದು, ರೇಷ್ಮೆ ಬೆಳೆಯನ್ನು ರಾಜ್ಯದಲ್ಲಿ ಹೆಚ್ಚಿನ ಮಟ್ಟದಲ್ಲಿ ವಿಸ್ತರಿಸುವುದ ಕ್ಕೋಸ್ಕರ.

They have paid half percent interest.

SRI S. R. BOMMAI.— Repayable in... ?

MR. SPEAKER.— He may require sometime.

SRI Y. RAMAKRISHNA.—Sir, this pertains to only Tumkur District

MR. SPEAKER.—This pertains to the whole scheme as such.

ಶ್ರೀ ಎಸ್. ಆರ್. ಬೊಮ್ಮಾಯಿ,— ರೇಷ್ಮೆ ಅಭಿವೃದ್ಧಿಗಾಗಿ ವರ್ಲ್ಡ್ ಬ್ಯಾಂಕ್‌ನವರ ಸಹಾಯ ತೆಗೆದುಕೊಳ್ಳತಕ್ಕ ಯೋಜನೆ ನಮ್ಮ ಸರ್ಕಾರದೊಡನೆಯಾಗಿದ್ದಿದು ಸುಮಾರು ೮ ವರ್ಷಗಳ ಹಿಂದೆ. ಇದಕ್ಕೆ ಅಗ್ರಿಮೆಂಟ್ ಆಗಿ ೮ ವರ್ಷಗಳಾಗಿವೆ. ಇವರು ಸಾಲವನ್ನು ತೆಗೆದುಕೊಳ್ಳಲಿಕ್ಕೆ ತಡವಾದ ಕಾರಣ ಮತ್ತು ಸೊಸೈಟಿಗಳನ್ನು ರೀಆರ್ಗನೈಸ್ ಮಾಡುವುದು ತಡವಾದ ಕಾರಣ ಹಾಗೂ ಅವರು ಕೇಳಿ ದಂಥ ಕಂಡೀಷನ್ಸ್ ಫುಲ್‌ಫಿಲ್ ಮಾಡದೆ ಇದ್ದುದರಿಂದ ಅವರಿಂದ ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ, ಸರ್ಕಾರ ಅವರೇನು ಕರಾರುಗಳನ್ನು ಹಾಕಿದ್ದಾರೋ ಅವುಗಳನ್ನು ಸರಿಯಾಗಿ ಪಾಲಿಸದೆ ಇದ್ದುರಿಂದ ಹಣ ಲ್ಯಾಪ್ಸ್ ಆಗುವ ಮಟ್ಟಕ್ಕೆ ಹೋಗಿದೆ. ಈಗಲಾದರೂ ಅವರು ಕೊಡತಕ್ಕ ಹಣವನ್ನು ತೆಗೆದುಕೊಳ್ಳಲಿಕ್ಕೆ ತೀರ್ವಗತಿಯಿಂದ ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.— ಈ ಯೋಜನೆ ಜಾರಿಗೆ ಬಂದಿದ್ದು ೧೯೮೦-೮೧ರಿಂದ,

ಶ್ರೀ ಎಂ. ಸಿ ಬಸಪ್ಪ. ಉತ್ತರದಲ್ಲಿ ಬಿತ್ತನೆ ಗೂಡಿನ ನೆರವು ಬೆಲೆಯನ್ನು ಸರ್ಕಾರ ಕೊಟ್ಟಿದೆ ಎಂದು ಹೇಳಿದ್ದೀರಿ. ಅದು ಕಕೂನ್‌ಗೆ ಸಪೋರ್ಟಿಂಗ್ ಪ್ರೈಸ್ ಕೊಡುವುದೇ ಅಥವಾ ಯಾವ ತರಹ ಇನ್‌ಸೆಂಟೀವ್ ಕೊಟ್ಟಿದ್ದೀರಿ ತಿಳಿಸುತ್ತೀರಾ ? ರೈತರಿಗೆ ಯಾವ ರೇಟಿನಲ್ಲಿ ಕೊಟ್ಟಿದ್ದೀರಿ ?

ಶ್ರೀ ವೈ ರಾಮಕೃಷ್ಣ.— ರೇಟು ಕೊಟ್ಟಿರುವ ವಿವರಗಳು ಈಗ ಇಲ್ಲ. ಬೈವೋಲ್ಟಿನ್‌ಗೆ ಯಾವ ರೀತಿಯ ಸಪೋರ್ಟಿಂಗ್ ಪ್ರೈಸ್ ಕೊಟ್ಟಿದ್ದೇವೆಯೋ ಅದೇ ರೀತಿಯಲ್ಲಿ ಮೈಸೂರು ಗೂಡಿಗೂ ಕೊಟ್ಟಿದ್ದೇವೆ.

ಶ್ರೀ ಎಂ ಪುಟ್ಟಮಾದಯ್ಯ.— ಯಾವ ಯಾವ ಜಿಲ್ಲೆಯಲ್ಲಿ ತಾವು ಸರ್ಕಾರದಿಂದ ಇದಕ್ಕಾಗಿ ಹಣವನ್ನು ಖರ್ಚು ಮಾಡಿದ್ದೀರಿ, ಮತ್ತು ಯಾವ ಯಾವ ಜಿಲ್ಲೆಗೆ ಇದನ್ನು ವಿಸ್ತರಿಸಿದ್ದೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕು ಹಾಗೂ ಊಜಿ ನೊಣವನ್ನು ಹೋಗಲಾಡಿಸುವುದಕ್ಕೆ ನೈಲಾನ್ ಪರದೆ, ತಂತಿ ಬಲೆಯನ್ನು ಯಾವ ಯಾವ ತಾಲ್ಲೂಕಿನಲ್ಲಿ ಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸಬೇಕು ?

ಶ್ರೀ ವೈ. ರಾಮಕೃಷ್ಣ.— ಗ್ರೈನೇಜ್ ಕಟ್ಟಲಿಕ್ಕೆ ೩೫ ಲಕ್ಷ ರೂಪಾಯಿಗಳು, ಕಕೂನ್ ಮಾರ್ಕೆಟ್ ಕಟ್ಟುವುದಕ್ಕೆ ೧೧ ಲಕ್ಷ ರೂಪಾಯಿಗಳು, ತಾಂತ್ರಿಕ ಸಲಹಾ ಕೇಂದ್ರಗಳನ್ನು ಕಟ್ಟಲಿಕ್ಕೆ ನಾಲ್ಕು ತಾಲ್ಲೂಕುಗಳಲ್ಲಿ ೨.೨೯ ಲಕ್ಷ ರೂಪಾಯಿಗಳು, ರೇರಿಂಗ್ ಹೌಸಸ್ ಕಟ್ಟಲಿಕ್ಕೆ ೧೦,೧೨,೮೦೦ ನೂಲಿನ ಯಂತ್ರವನ್ನು ಕೊಳ್ಳಲಿಕ್ಕೆ ೪೫ ಸಾವಿರ ರೂಪಾಯಿಗಳು ಇನ್ನೂ ಕೆಲವು ಐಟಂಗಳು ಸೇರಿ, ಒಟ್ಟು ೬೫,೫೮,೦೦೦ ರೂಪಾಯಿಗಳು ಖರ್ಚಾಗಿವೆ.

ಶ್ರೀ ಬಿ. ರಾಜುಗೌಡ.— ಸ್ವಾಮಿ, ಡಚ್ ಸರ್ಕಾರದವರು ಸಾಲ ಕೊಡತಕ್ಕದ್ದನ್ನು ನಿಲ್ಲಿಸಿ ಬಿಟ್ಟರೆ ಬಿತ್ತನೆ ಗೂಡಿಗೆ ಕೊಡತಕ್ಕ ಪರಿಹಾರಧನವನ್ನು ಮುಂದುವರಿಸಿಕೊಡು ಹೋಗುತ್ತೀರಾ ?

ಶ್ರೀ ವೈ. ರಾಮಕೃಷ್ಣ. — ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಸಿ. ಬಸಪ್ಪ.— ಬಿತ್ತನೆ ಗೂಡಿನ ನೆರವು ಬೆಲೆಯನ್ನು ಸರ್ಕಾರ ಕೊಟ್ಟಿದೆ ಎಂದು ಹೇಳಿದ್ದೀರಿ, ಅದರ ವಿವರಗಳನ್ನು ದಯವಿಟ್ಟು ಸಭೆಯ ಮುಂದಿಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.— ಅದನ್ನು ನೋಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.— ಇದರಲ್ಲಿ ಆಲೋಚನೆ ಮಾಡುವ ಇಲ್ಲವೇ ನೋಡೋಣ ಎಂದು ಹೇಳುವ ಪ್ರಶ್ನೆಯೇ ಇಲ್ಲ...

ಶ್ರೀ ಎಂ. ಪಂಪಾಪತಿ.— ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರತಕ್ಕ ದಿನಗೂಲಿ ಕೆಲಸಗಾರರ ಏನಿದ್ದಾರೆ, ಅವರಿಗೆ ಸರ್ಕಾರ ಗೊತ್ತುಪಡಿಸಿರತಕ್ಕ ಕೂಲಿಯನ್ನು ಕೊಡುತ್ತಿದ್ದಾರೆಯೇ ? ಏತಕ್ಕೆಂದರೆ ಇದರಲ್ಲಿ ಅನೇಕ ವಿದ್ಯಾವಂತರೂ ಸಹ ಕೆಲಸ ಮಾಡುತ್ತಿದ್ದಾರೆ, ಇಂತಹವರನ್ನು ಖಾಯಂ ಮಾಡುತ್ತೀರಾ ?

ಅಧ್ಯಕ್ಷರು.— ರೈತರಿಗೆ ಹಣವೇ ಸರಿಯಾಗಿ ಹೋಗಿಲ್ಲವೆಂದು ಹೇಳುತ್ತಿದ್ದಾರೆ. ಇನ್ನು ಕೂಲಿ ಎಲ್ಲಿಂದ ಬಂತು. ?

ಶ್ರೀ ಎಂ. ಪಂಪಾಪತಿ.— ಈ ಕ್ಷೇತ್ರ ಅಭಿವೃದ್ಧಿಯಾಗಬೇಕಾದರೆ ಅವರು ಅಲ್ಲಿ ಕೆಲಸ ಮಾಡಬೇಕು. ಕೆಲಸ ಮಾಡತಕ್ಕವರನ್ನು ತೃಪ್ತಿಪಡಿಸತಕ್ಕದ್ದು ಸರ್ಕಾರದವರ ಕರ್ತವ್ಯ. ಆದುದರಿಂದ ಅವರನ್ನೆಲ್ಲಾ ಖಾಯಂ ಮಾಡಿ, ಅವರಿಗೆ ನಿಗದಿ ಮಾಡಿರತಕ್ಕ ಕೂಲಿಯನ್ನು ಕೊಡಿಸುವುದಕ್ಕೆ ಏನಾ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ವೈ. ರಾಮಕೃಷ್ಣ.— ರೇಷ್ಮೆ ಕೈಗಾರಿಕಾ ಇಲಾಖೆಯವರಿಗೆ ಈಗಾಗಲೇ ಡೈರೆಕ್ಟ್ ಮಾಡಿದ್ದೇವೆ, ಒಂದು ವೇಳೆ ಅವರು ಇದನ್ನು ಕವರ್ ಮಾಡಿರದಿದ್ದರೆ ಮತ್ತೆ ತಿಳಿಸಿ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ, ಇದನ್ನು ಅರ್ಧ ಗಂಟೆಯ ಚರ್ಚೆಗೆ ತೆಗೆದು ಕೊಳ್ಳುವುದು ಒಳ್ಳೆಯದೆಂದು ಸನಗನ್ನಿಸುತ್ತದೆ.

ಅಧ್ಯಕ್ಷರು.— ದಯಮಾಡಿ ಬರೆದು ಕಳುಹಿಸಿ. ತೆಗೆದುಕೊಳ್ಳೋಣ...

ಶ್ರೀ ಡಿ.ಟಿ. ಮಾಯಣ್ಣ.— ಅಧ್ಯಕ್ಷರೇ, ಈ ಬಿತ್ತನೆ ಗೂಡಿನ...

ಅಧ್ಯಕ್ಷರು.— ಶ್ರೀ ಮಾಯಣ್ಣನವರೇ, ತಾವು ಅರ್ಧ ಗಂಟೆ ಚರ್ಚೆಗೆ ಬರೆದು ಕಳುಹಿಸಿ- ಆಮೇಲೆ ನೋಡೋಣ....

Formation of Lakamanahalli Lay-out in Dharwad District by the State Housing Board

677. SRI BHAVURAO DESPANDE (Dharwad).—Will the Minister for Housing and Urban Development be pleased to state :—

(a) Whether it has come to the notice of the Government that the State Housing Board has formed Lakamanahalli lay-out in Dharwad and collected money from the citizens for allotment of sites ;

(b) Whether it has come to the notice of the Government that the Housing Board has not provided sites to them though many years have been elapsed ;

(c) Whether Government would formulate scheme for providing sites ?

SRI DHARAM SINGH.— (Minister for Housing and Urban Development).—

(a) Yes

(b) This scheme has not been implemented since this lay-out has been included in the area of land occupied at the time of Government land occupation movement.

(c) Housing construction scheme has been taken up at Dooddanaikanakoppa as opined by the local leaders and Revenue Officers and assistance from HUDCO, Delhi has been sought and its approval is awaited.

ಶ್ರೀ ಬಾಪುರಾವ್ ದೇಶಪಾಂಡೆ.—ಸ್ವಾಮಿ, ಈ ಯೋಜನೆಗೆ ಎಷ್ಟು ಜನರಿಂದ ಹಣ ಬಂದಿದೆ ? ಮತ್ತು ಯಾರು ಯಾರಿಂದ ಹಣ ಸಂದಾಯವಾಗಿದೆ ?

ಶ್ರೀ ಧರ್ಮಸಿಂಗ್.—ಡಿಮ್ಯಾಂಡ್ ಸರ್ವೆ ಕಂಡಕ್ಟ್ ಆಗಿದೆ. ಎಷ್ಟು ಜನರಿಂದ ಹಣ ಬಂದಿದೆ ಜನ್ನುವ ಬಗ್ಗೆ ನನ್ನ ಹತ್ತಿರ ಈಗ ವಿವರ ಇಲ್ಲ.

ಶ್ರೀ ಬಾಪುರಾವ್ ದೇಶಪಾಂಡೆ.—೮-೧೦ ವರ್ಷಗಳ ಹಿಂದೆ ಯಾರು ಯಾರು ಹಣವನ್ನು ಕಟ್ಟಿದ್ದಾರೆ, ಅವರನ್ನು ಯಾವ ಯೋಜನೆ ಕೆಳಗೆ ಸೇರಿಸಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ ?

ಶ್ರೀ ಧರ್ಮಸಿಂಗ್.—ದೊಡ್ಡ ನಾಯಕನಕೊಪ್ಪದಲ್ಲಿ ಜಮೀನನ್ನು ತೆಗೆದುಕೊಂಡಿದ್ದೇವೆ, ಅಲ್ಲಿ ೭೭೬ ಮನೆಗಳನ್ನು ಕಟ್ಟಿಸುತ್ತಿದ್ದೇವೆ, ಹಿಂದೆ ಏನು ೧ ಸಾವಿರದ ೯೫ ಜನರಿಗೆಂದು ಸ್ಕೀಂ ಮಾಡಿದ್ದೆವೋ ಅವರು ಅಲ್ಲಿ ಬೇಕು ಎಂದು ಹೇಳಿದರೆ ಅವರಿಗೂ ಅಲ್ಲಿ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇವೆ, ಬೇಡವೆಂದರೆ ಹಣ ವಾಪಸ್ಸು ಮಾಡಿ ಬಿಡುತ್ತೇವೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಹೌಸಿಂಗ್ ಬೋರ್ಡ್‌ನವರು ಹುಬ್ಬಳ್ಳಿ ಧಾರವಾಡದಲ್ಲಿ ಕೆಲವು ಲೇ ಔಟ್‌ಗಳನ್ನು ಮಾಡುವುದರ ಬಗ್ಗೆ ನೋಟಿಫಿಕೇಷನ್ ಹೊರಡಿಸಿ ಜನರಿಂದ ಅರ್ಜಿಯನ್ನು